(ಇಂದು ದಿನಾಂಕಃ 13–03–2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ  ಬೋಧಿಸಲಾಯಿತು.)

(ಸಾಕ್ಷಿದಾರರು ಕೊಂಕಣಿ ಭಾಷೆ ಮಾತನಾಡುವವರಾಗಿದ್ದರಿಂದ ವಕೀಲರಾಗಿರುವ ಶ್ರೀ ವಿ.ಎ.ಟಿ. ವಕೀಲರನ್ನು ಕನ್ನಡ ಭಾಷೆಗೆ ಭಾಷಾಂತರ ಮಾಡಲು ನೇಮಿಸಿಕೊಳ್ಳಲಾಯಿತು.)

**ಪಾಟೀ ಸವಾಲುಃ  ವಾದಿ ಪರಃ ಶ್ರೀ  ಎಂ.ಬಿ.ಎನ್. ವಕೀಲರಿಂದಃ**

ದಾವಾ ಸ್ವತ್ತನ್ನು ನನ್ನ ಮಾವ ಕ್ರಯಕ್ಕೆ ತೆಗೆದುಕೊಂಡಿದ್ದರು. ದಾವಾ ಸ್ವತ್ತಿನಲ್ಲಿ ವಾದಿಗೆ ಬರಬೇಕಾದ ಭಾಗವನ್ನು ಕೊಡಲು ನನಗೇನೂ ತೊಂದರೆ ಇಲ್ಲ ಎಂದರೆ ಸರಿ.

**ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಆರ್.ವಿ.ಬಿ. ವಕೀಲರಿಂದಃ**

ನಾನು 10 ನೇ ತರಗತಿಯವರೆಗೆ ಓದಿದ್ದೇನೆ. ದಾವಾ ಆಸ್ತಿಗೆ ನಾನು ಮದುವೆಯಾದ ನಂತರ ಬಂದಿದ್ದೇನೆ ಎಂದರೆ ಸರಿ. ಮದುವೆಯ ಮುಂಚೆ ನನ್ನ ಊರು ಬೆಳಗಾವಿ ಇದ್ದು, ಅಲ್ಲಿ ವಾಸವಾಗಿದ್ದೆ. ನನ್ನ ಮದುವೆಯಾಗಿ 40 ವರ್ಷಗಳಾಗಿವೆ. ನನ್ನ ಮದುವೆ ಯಾವ ವರ್ಷದಲ್ಲಿ ಆಗಿದೆ ಎಂದು ಗೊತ್ತಿಲ್ಲ, ಸಾಕ್ಷಿ ಮುಂದುವರಿದು ನನ್ನ ಮದುವೆಯಾಗಿ 40 ವರ್ಷ ಮೇಲ್ಪಟ್ಟಾಗಿದೆ ಎಂದು ಹೇಳುತ್ತಾರೆ. ನನ್ನ ಮದುವೆ ಆಗುವ ಮುಂಚೆ ವಾದಿ ಮತ್ತು ಇನ್ನುಳಿದ ಪ್ರತಿವಾದಿಯರ ಕುಟುಂಬದಲ್ಲಿ ಏನೆಲ್ಲಾ ವ್ಯವಹಾರ ಆಗಿದೆ ಎಂದು ವೈಯಕ್ತಿಕವಾಗಿ ಮಾಹಿತಿ ಇಲ್ಲ ಎಂದರೆ ಸಾಕ್ಷಿ ಮುಂಚೆ ಗೊತ್ತಿರಲಿಲ್ಲ ನಂತರ ಗೊತ್ತಾಗಿದೆ ಎಂದು ಹೇಳುತ್ತಾರೆ. 1966 ರಲ್ಲಿ 1 ನೇ ಪ್ರತಿವಾದಿ ಕ್ರಯಕ್ಕೆ ತೆಗೆದುಕೊಂಡಿದ್ದಾಳೆ ಎಂದರೆ ಸಾಕ್ಷಿ 3 ಜನರ ಹೆಸರಿನಲ್ಲಿ ಇತ್ತು, ಅದಾದ ನಂತರ ನಮ್ಮ ಮಾವ 1 ನೇ ಪ್ರತಿವಾದಿಯ ಹೆಸರಿನಲ್ಲಿ ಖರೀದಿಸಿದ್ದಾರೆ ಎಂದು ಹೇಳುತ್ತಾರೆ. ನಾನು ಕ್ರಯಪತ್ರವನ್ನು ಓದಿಲ್ಲ. ಕ್ರಯಪತ್ರದಲ್ಲಿ ನನ್ನ ಮಾವ 1 ನೇ ಪ್ರತಿವಾದಿಯ ಹೆಸರಿನಲ್ಲಿ ಕ್ರಯಕ್ಕೆ ತೆಗೆದುಕೊಂಡಿದ್ದೇನೆ ಎಂದು ಬರೆಸಿದ್ದರ ಬಗ್ಗೆ ನನಗೆ ಗೊತ್ತಿಲ್ಲ. 1975 ರಲ್ಲಿ 3 ಜನರ ಹೆಸರಿನಲ್ಲಿ ಕ್ರಯವಾದ ಆಸ್ತಿ 1 ನೇ ಪ್ರತಿವಾದಿಯ ಹೆಸರಿನಲ್ಲಿ ಕ್ರಯಪತ್ರವಾಗುವಾಗ ನಾನು ಹಾಜರಿರಲಿಲ್ಲ ಎಂದರೆ ಸರಿ. ಆ ಸಮಯದಲ್ಲಿ ಯಾರು ಯಾರಿಗೆ ಹಣವನ್ನು ನೀಡಿದ್ದಾರೆ ಎಂದು ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ, ಸಾಕ್ಷಿ ಮುಂದುವರಿದು ಆದರೆ ನನ್ನ ಗಂಡ ನನಗೆ ಹೇಳಿದ್ದಾರೆ ಎಂದು ಹೇಳುತ್ತಾರೆ. 2 ನೇ ಪ್ರತಿವಾದಿಯ ಮದುವೆಯ ಸಮಯದಲ್ಲಿ 250 ಗ್ರಾಂ ಬಂಗಾರ ಕೊಟ್ಟು ಆಡಂಬರವಾಗಿ ಮದುವೆ ಮಾಡಿಕೊಟ್ಟಿದ್ದೇನೆ ಎಂದು ಬಾಯಿಮಾತಿನಲ್ಲಿ ಹೇಳುವುದನ್ನು ಬಿಟ್ಟು ಬೇರೆ ಯಾವುದೇ ದಾಖಲಾತಿಗಳು ಇಲ್ಲ ಎಂದರೆ ಸರಿ, ಸಾಕ್ಷಿ ಮುಂದುವರಿದು ನನಗೆ ಗೊತ್ತಿದೆ ಎಂದು ಹೇಳುತ್ತಾರೆ. ನನ್ನ ಮದುವೆ ಸಮಯಕ್ಕೆ ನನಗೆ 200 ಗ್ರಾಂ ಬಂಗಾರವನ್ನು ಕೊಟ್ಟಿದ್ದರು

ನನ್ನ ತಂದೆಯ ಮನೆಯ ಕಡೆಯಿಂದ 210 ಗ್ರಾಂ ಬಂಗಾರವನ್ನು ಕೊಟ್ಟಿದ್ದರು. 2 ನೇ ಪ್ರತಿವಾದಿಗೆ 250 ಗ್ರಾಂ ಬಂಗಾರ ಕೊಟ್ಟು ಮದುವೆ ಮಾಡಿಕೊಟ್ಟಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ತವರುಮನೆಯಿಂದ 150 ಗ್ರಾಂ ಬಂಗಾರವನ್ನು ತಂದು ಅಡವಿಟ್ಟು ಮನೆಯ ಜವಾಬ್ದಾರಿ ಮತ್ತು ನನ್ನ ಗಂಡನ ಆಸ್ಪತ್ರೆಯ ಖರ್ಚಗಳನ್ನು ನೋಡಿಕೊಂಡಿದ್ದೇನೆ ಎಂದು ಬರೆಸಿದ್ದೇನೆ ಅನ್ನುವುದು ಸರಿಯಲ್ಲ. ನನ್ನ ಯಜಮಾನರಿಗೆ ಸೇರಿದ ಯಶಿಸ್ವಿನಿ ಕಾರ್ಡ ಇತ್ತು. ನಾನು ಮತ್ತು ಈ ಕೇಸಿನ ವಾದಿ ಅನ್ಯೋನ್ಯವಾಗಿದ್ದೇವೆ ಅನ್ನುವುದು ಸರಿಯಲ್ಲ. ಈ ದಾವೆಯನ್ನು ಹಾಕುವ ಮುಂಚೆ ನಾನು ಮತ್ತು ವಾದಿ ಪರಸ್ಪರ ಮಾತನಾಡಿಕೊಂಡು ಚರ್ಚಿಸಿ ಈ ದಾವೆ ಹಾಕಿದ್ದೇವೆ ಎಂದರೆ ಸರಿ. ನನ್ನ ಮಾವ ಮೃತಪಟ್ಟ ನಂತರ, 1 ನೇ ಪ್ರತಿವಾದಿಯ ಖರ್ಚು ವೆಚ್ಚಗಳನ್ನು ಮತ್ತು ಆಗು-ಹೋಗುಗಳನ್ನು 2 ನೇ ಪ್ರತಿವಾದಿ ನೋಡಿಕೊಂಡಿದ್ದಾರೆ ಅನ್ನುವುದು ಸರಿಯಲ್ಲ. 1 ನೇ ಪ್ರತಿವಾದಿ 2 ನೇ ಪ್ರತಿವಾದಿಯೊಂದಿಗೆ ವಾಸವಾಗಿದ್ದಾಳೆ ಎಂದರೆ ಸಾಕ್ಷಿ 1 ನೇ ಪ್ರತಿವಾದಿಯನ್ನು 2 ನೇ ಪ್ರತಿವಾದಿ ಒತ್ತಾಯಪೂರ್ವಕವಾಗಿ ಕರೆದುಕೊಂಡು ಹೋಗಿದ್ದಾಳೆ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿಯನ್ನು ನಾನು ಚೆನ್ನಾಗಿ ನೋಡಿಕೊಂಡಿದ್ದೇನೆ ಮತ್ತು ಅವಳ ಚಿಕಿತ್ಸೆಗೆ ಹಣ ಖರ್ಚು ಮಾಡಿದ್ದೇನೆ ಎಂದು ತೋರಿಸುವ ದಾಖಲಾತಿಗಳು ಇಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯನ್ನು ನಾನು ಸರಿಯಾಗಿ ನೋಡಿಕೊಂಡಿಲ್ಲ, ಅವಳಿಗೆ ತೊಂದರೆ ಕೊಡುತ್ತಿದ್ದೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿ, 2 ನೇ ಪ್ರತಿವಾದಿಗೆ ದಾವಾಸ್ತಿಗೆ ಸಂಬಂಧಪಟ್ಟಂತೆ ದಾನಪತ್ರ ಬರೆದುಕೊಟ್ಟಿದ್ದಾಳೆ ಎಂದರೆ ಸಾಕ್ಷಿ ಒತ್ತಾಯಪೂರ್ವಕವಾಗಿ ಮಾಡಿಕೊಂಡಿದ್ದಾಳೆ ಎಂದು

ಹೇಳುತ್ತಾರೆ. ದಾನಪತ್ರ ನೋಂದಣಿಯಾಗುವ ಸಮಯದಲ್ಲಿ ನಾನು ಇರಲಿಲ್ಲ. ದಾನಪತ್ರ ನೋಂದಣಿಯಾಗುವ ಸಮಯದಲ್ಲಿ ಯಾರು ಯಾರು ಇದ್ದರು ಮತ್ತು ಏನೆಲ್ಲಾ ವ್ಯವಹಾರ ಆಯಿತು ಎಂದು ನಿಮಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸಾಕ್ಷಿ ನಮಗೆ ಗೊತ್ತಿಲ್ಲದ ಹಾಗೆ ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ. ದಾವಾಸ್ತಿಗೆ ಸಂಬಂಧಪಟ್ಟಂತೆ ರಿಪೇರಿಗಾಗಿ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಬ್ಯಾಂಕಿನಿಂದ ಸಾಲ ಪಡೆದುಕೊಂಡು ದಾವಾ ಸ್ವತ್ತಿನ ರಿಪೇರಿ ಮಾಡಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಲುಪಿಂಗ್ ಕಂಪನಿಯಿಂದ ನನ್ನ ಮಗ ಸಾಲ ಪಡೆದುಕೊಂಡಿದ್ದ. ನಾನು ಯಾವುದೇ ಸಾಲವನ್ನು ಪಡೆದುಕೊಳ್ಳದಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾನಪತ್ರದ ಬಗ್ಗೆ ನನಗೆ ಎಲ್ಲಾ ಮಾಹಿತಿಗಳು ಇದ್ದರೂ ಸಹ ದಾನಪತ್ರದ ಬಗ್ಗೆ ಮಾಹಿತಿ ಇರಲಿಲ್ಲ ಎಂದು ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಸುಳ್ಳು ಬರೆಸಿದ್ದೇನೆ ಅನ್ನುವುದು ಸರಿಯಲ್ಲ. 1 ನೇ ಪ್ರತಿವಾದಿ, 2 ನೇ ಪ್ರತಿವಾದಿಗೆ ದಾನಪತ್ರ ಮಾಡಿಕೊಡುವಾಗ ನಮ್ಮೆಲ್ಲರಿಗೆ ತಿಳಿಸಿ ಅವರ ಸ್ವ ಇಚ್ಛೆಯಿಂದ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ದಾನಪತ್ರದ ಬಗ್ಗೆ ಎಲ್ಲಾ ವಿಷಯಗಳು ಗೊತ್ತಿದ್ದರೂ ಸಹ ಸುಳ್ಳು ದಾವೆಯನ್ನು ವಾದಿ ಕಡೆಯಿಂದ ಹಾಕಿಸಿ, ದಾವಾ ಸ್ವತ್ತಿನಲ್ಲಿ ಹಕ್ಕು ಪಡೆಯಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2 ನೇ ಪ್ರತಿವಾದಿಯ ಮದುವೆ 1986 ರಲ್ಲಿ ಆಗಿದೆ ಎಂದರೆ ಸರಿ. ಹಬ್ಬುವಾಡಾದಲ್ಲಿ ಇರುವಂತಹ ಆಸ್ತಿಯನ್ನು 1996 ರಲ್ಲಿ ಅಂದರೆ 2 ನೇ ಪ್ರತಿವಾದಿಯ ಮದುವೆಯಾದ 10 ವರ್ಷಗಳ ನಂತರ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ನಿಖರವಾಗಿ ಹೇಳಲು ಬರುವುದಿಲ್ಲ ಎಂದು ಹೇಳುತ್ತಾರೆ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿರುವ ವಿಷಯಗಳನ್ನು ಸುಳ್ಳು

ಬರೆಸಿದ್ದೇನೆ ಎಂದರೆ ಸರಿಯಲ್ಲ. ನಿ.ಡಿ.7 ರಿಂದ ನಿ.ಡಿ. 13 ರವರೆಗಿನ ದಾಖಲಾತಿಗಳನ್ನು ಈ ಕೇಸಿಗೋಸ್ಕರ ಸುಳ್ಳು ಸೃಷ್ಠಿ ಮಾಡಿ ಹಾಜರುಪಡಿಸಿದ್ದೇನೆ ಅನ್ನುವುದು ಸರಿಯಲ್ಲ. ನಿ.ಡಿ.13 ಕ್ಕೆ ಸಹಿ, ಹೆಸರು ಇಲ್ಲ ಎಂದರೆ ಸರಿ. ನಿ.ಡಿ.13 ನ್ನು ಈ ಕೇಸಿಗೋಸ್ಕರ ಸೃಷ್ಠಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಿ.ಡಿ.13 ರಲ್ಲಿ ಆಶಾ ಭೋಸ್ಲೆ ಎಂದು ಇಂಗ್ಲಿಷ್‌ನಲ್ಲಿ ಬರೆದು ಕವನವನ್ನು ಹಿಂದಿಯಲ್ಲಿ ಬರೆದಿದ್ದಾರೆ ಎಂದರೆ ಸರಿ. ನಂತರ ಮಧುಬಾಲಾ ಎಂದು ಬರೆದು ಕವನದ ಒಂದು ತುಣುಕನ್ನು ಬರೆದಿದ್ದಾರೆ ಎಂದರೆ ಸರಿ. ಈ ಕೇಸಿಗೋಸ್ಕರ ದಾಖಲಾತಿಗಳನ್ನು ಸೃಷ್ಠಿ ಮಾಡಿಕೊಂಡು ಬಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಡಿ.7 ರಿಂದ ನಿ.ಡಿ.17 ರ ದಾಖಲಾತಿಗಳು 1 ನೇ ಪ್ರತಿವಾದಿಯ ಗಂಡನಿಗೆ ಸೇರಿದ ದಾಖಲಾತಿಗಳು ಅಲ್ಲ ಅನ್ನುವುದು ಸರಿಯಲ್ಲ. ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ ವಿ.ಎಂ.ಕೆ. ವಕೀಲರಿಂದಃ</u>**

ದಾವಾ ಸ್ವತ್ತು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಅನ್ನುವುದು ಸರಿಯಲ್ಲ. 1 ನೇ ಪ್ರತಿವಾದಿ 2 ನೇ ಪ್ರತಿವಾದಿಗೆ ದಾವಾ ಸ್ವತ್ತನ್ನು ಕಾನೂನುಬದ್ಧವಾಗಿ ದಾನಪತ್ರದ ಮೂಲಕ ಕೊಟ್ಟಿದ್ದಾರೆ ಅನ್ನುವುದು ಸರಿಯಲ್ಲ, ಸಾಕ್ಷಿ ಮುಂದುವರಿದು ಒತ್ತಾಯಪೂರ್ವಕವಾಗಿ ಮಾಡಿಸಿಕೊಂಡಿದ್ದಾರೆ ಎಂದು ಹೇಳುತ್ತಾರೆ. ದಾವಾ ಸ್ವತ್ತು 2 ನೇ ಪ್ರತಿವಾದಿಯ ಮಾಲಿಕತ್ವದಲ್ಲಿ ಇರುವುದರಿಂದ ದಾವಾ ಸ್ವತ್ತಿನಲ್ಲಿ ನಮಗೆ ಭಾಗ ಕೇಳಲು ಬರುವುದಿಲ್ಲ ಅನ್ನುವುದು ಸರಿಯಲ್ಲ. 2 ನೇ ಪ್ರತಿವಾದಿ ಅನುಮತಿಯ ಮೇರೆಗೆ ನಮಗೆ ವಾಸ ಮಾಡಲು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಅನುಮತಿ ಮೇರೆಗೆ ಕೊಟ್ಟಿದ್ದರಿಂದ ಸದರಿಯವರು ದಾವಾ ಸ್ವತ್ತನ್ನು

ಬಿಟ್ಟು ಕೊಡಲು ಕೇಳಿದಾಗ ಬಿಟ್ಟು ಕೊಡಬೇಕಾಗುತ್ತದೆ ಅನ್ನುವುದು ಸರಿಯಲ್ಲ. 2 ನೇ ಪ್ರತಿವಾದಿಯ ಮದುವೆಯ ಕಾಲಕ್ಕೆ ಯಾವುದೇ ಬಂಗಾರವನ್ನು ಕೊಟ್ಟಿಲ್ಲ ಅನ್ನುವುದು ಸರಿಯಲ್ಲ.

2 ನೇ ಪ್ರತಿವಾದಿ ಪರ ವಕೀಲರು, ಇನ್ನುಳಿದ ಪಾಟೀ ಸವಾಲನ್ನು 1 ನೇ ಪ್ರತಿವಾದಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ಹೇಳುತ್ತಾರೆ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಕಾರವಾರ